ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಂಚಲಾದ ಆಶ್ರಯ ಯೋಜನೆ ಮನೆಗಳ ಸಾಲದ ಪಾವತಿ.

3387(4427) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಹಂಚಲಾದ ಆಶ್ರಯ ಮನೆಗಳ ಸಾಲದ ಮರುಪಾವತಿಗಾಗಿ ವಿಶೇಷ ಘಟಕ ಯೋಜನೆಯಿಂದ ಖರ್ಚು ಮಾಡಲಾದ ಹಣ ಎಷ್ಟು;

ಆ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರನ್ನು ಹೊರತುಪಡಿಸಿ ಇತರೆ ವರ್ಗದ ಜನರಿಗೆ ಆಶ್ರಯ ಯೋಜನೆಯಡಿ ಹಂಚಲಾದ ಮನೆಗಳ ಸಾಲದ ಮರುಪಾವತಿಗಾಗಿ ಅನುಸರಿಸುತ್ತಿರುವ ನಿಯಮಗಳೇನು;

ಇ) ಇತರೆ ವರ್ಗದ ಜನರಿಂದ ಆಶ್ರಯ ಯೋಜನೆಯಡಿ ಪಡೆದ ಮನೆಗಳ ಸಾಲದ ಹಣವನ್ನು ವಸೂಲು ಮಾಡಲಾಗಿದೆಯೇ;

ಈ) ಹಾಗಿದ್ದಲ್ಲಿ ಈ ರೀತಿ ವಸೂಲು ಮಾಡಲಾದ ಸಾಲದ ಒಟ್ಟು ಹಣ ಎಷ್ಟು ಮತ್ತು ಎಷ್ಟು ಜನರಿಂದ ವಸೂಲು ಮಾಡಲಾಗಿದೆ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :—

ಅ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಆಶ್ರಯ ಗ್ರಾಮೀಣ ಯೋಜನೆಯಡಿ ಮನೆಗಳಿಗಾಗಿ ಸರ್ಕಾರದಿಂದ ಪೂರ್ಣ ಸಹಾಯಧನವನ್ನು ಮಾತ್ರ ನೀಡಲಾಗುತ್ತಿದೆ. ಆದ್ದರಿಂದ ಸಾಲದ ಮರುಪಾವತಿ ಪ್ರಶ್ನೆ ಉದ್ಭವಿಸುವುದಿಲ್ಲ. ಪಟ್ಟಣದ ಪ್ರದೇಶದ ಮನೆಗಳಿಗೆ ಆಶ್ರಯ ಯೋಜನೆಯಡಿ ಸಾಲ ನೀಡುತ್ತಿದ್ದು ಸರ್ಕಾರ ಮರುಪಾವತಿಗಾಗಿ ಅಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆ) 45 ವರ್ಷಗಳ ಅವಧಿಯಲ್ಲಿ ಕಂತಿನ ರೂಪದಲ್ಲಿ ಸಾಲ ಮರು ಪಾವತಿಗಾಗಿ ಅವಕಾಶವಿದೆ.

ಇ) ಇನ್ನೂ ವಸೂಲಿಯಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.